

## ಸಿಎಫ್‌ಟಿಆರ್‌ಐ...

ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ (ಸಿಎಫ್‌ಟಿಆರ್‌ಐ) ಮತ್ತು ಕನ್ನಡ ಸಹೃದಯ ಬಳಗದ ವತಿಯಿಂದ ಮೈಸೂರಿನ ಸಿಎಫ್‌ಟಿಆರ್‌ಐ ಸಭಾಂಗಣದಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ನಟ ಮದನ್ ಪಟೇಲ್, ಕನ್ನಡ ಸಹೃದಯ ಬಳಗದ ಅಧ್ಯಕ್ಷ ಕೃಷ್ಣಯ್ಯ, ಸಿಎಫ್‌ಟಿಆರ್‌ಐ ನಿರ್ದೇಶಕ ಡಾ.ಗಿರಿಧರ್ ಪರ್ವತಂ, ಕವಯಿತ್ರಿ ಅಮ್ಮಯ್ಯ ಶೇಖರ್ ಹಾಜರಿದ್ದರು.

### ಸಿಎಫ್‌ಟಿಆರ್‌ಐ: ಕನ್ನಡ ಸಹೃದಯ ಬಳಗದಿಂದ ರಾಜ್ಯೋತ್ಸವ

# ‘ಮಾತೃ ಭಾಷೆಯಲ್ಲಿ ಶಿಕ್ಷಣ ಅಗತ್ಯ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಮಾತೃ ಭಾಷೆಯಲ್ಲಿ ಮಕ್ಕಳಿಗೆ ಶಿಕ್ಷಣ ನೀಡುವುದು ಜ್ಞಾನವೃದ್ಧಿಗೆ ಸಹಕಾರಿ’ ಎಂದು ಕವಯಿತ್ರಿ ಅಮ್ಮಯ್ಯ ಶೇಖರ್ ಅಭಿಪ್ರಾಯಪಟ್ಟರು.

ಇಲ್ಲಿನ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯದಲ್ಲಿ (ಸಿಎಫ್‌ಟಿಆರ್‌ಐ) ಕನ್ನಡ ಸಹೃದಯ ಬಳಗದಿಂದ ಶನಿವಾರ ನಡೆದ ಕನ್ನಡ ರಾಜ್ಯೋತ್ಸವ ಸಂಭ್ರಮಾಚರಣೆಯಲ್ಲಿ ಮಾತನಾಡಿದ ಅವರು, ‘ಯಾವುದೇ ಭಾಷೆಯನ್ನು ಒತ್ತಡ ಹೇರುವುದು ಕ್ರಿಯಾತ್ಮಕ ಬೆಳವಣಿಗೆಗೆ ಹಾನಿಕಾರಕ’ ಎಂದರು.

‘ಸ್ಥಳೀಯ ಭಾಷೆಗಳನ್ನು ಇಂಗ್ಲಿಷ್‌ನಿಂದ ತುಳಿದು ಹಾಕುತ್ತಿರುವುದರಿಂದ ದೇಶದ ಪ್ರಗತಿ ಕುಂಠಿತವಾಗುತ್ತಿದೆ. ಇತರ ಭಾಷೆ ಕಲಿಯುವ ಅವಕಾಶ ಒಳ್ಳೆಯದು. ಆದರೆ, ಬೇರೆ ಭಾಷೆಯನ್ನೇ ಕಲಿಕೆಯ ಮಾಧ್ಯಮವಾಗಿಸುವುದು ಉತ್ತಮವಲ್ಲ’ ಎಂದರು.



ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಶನಿವಾರ ಕನ್ನಡ ರಾಜ್ಯೋತ್ಸವ ಆಚರಣೆಯನ್ನು ನಟ ಮದನ್ ಪಟೇಲ್ ಉದ್ಘಾಟಿಸಿದರು. ಆರ್.ಚೇತನಾ, ಗಿರಿಧರ್ ಪರ್ವತಂ, ಎಚ್.ಇ.ಕೃಷ್ಣಯ್ಯ, ಅಮ್ಮಯ್ಯ ಶೇಖರ್ ಹಾಜರಿದ್ದರು

ಕಾರ್ಯಕ್ರಮ ಉದ್ಘಾಟಿಸಿದ ನಟ ಮದನ್ ಪಟೇಲ್, ‘ಪ್ರತಿದಿನವೂ ಕನ್ನಡ ಬಳಸಬೇಕು, ಇತರರಿಗೂ ಅಭಿಮಾನದಿಂದ ಕಲಿಸಬೇಕು. ಆಗ ಭಾಷೆ ಬೆಳೆಯುತ್ತೆ, ಬಾಳುತ್ತೆ’ ಎಂದರು.

ಸಿಎಫ್‌ಟಿಆರ್‌ಐ ನಿರ್ದೇಶಕ ಗಿರಿಧರ್ ಪರ್ವತಂ ಮಾತನಾಡಿದರು.

ಪರಶಿವ ಮತ್ತು ತಂಡದಿಂದ ಗೀತ ಗಾಯನ ನಡೆಯಿತು. ‘ಕೇಳಿಸದೆ ಕಲ್ಲು ಕಲ್ಲಿನಲಿ ಕನ್ನಡ ನುಡಿ’, ‘ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು’, ‘ಕರುನಾಡ ತಾಯಿ ಸದಾ ಚಿನ್ಮಯಿ’ ಹಾಡುಗಳನ್ನು ಹಾಡಿ ನಾಡು, ನುಡಿಯ ಅಭಿಮಾನ ಪಸರಿಸಿದರು.

ಬಳಗದ ಅಧ್ಯಕ್ಷೆ ಆರ್.ಚೇತನಾ, ಪ್ರಧಾನ ಕಾರ್ಯದರ್ಶಿ ಎಚ್.ಇ.ಕೃಷ್ಣಯ್ಯ ಹಾಜರಿದ್ದರು.

ಚಿತ್ರಾವಳಿ

# ಪ್ರತಿಯೊಬ್ಬರೂ ಕನ್ನಡದಲ್ಲಿ ವ್ಯವಹರಿಸಿ

**ಮೈಸೂರು:** ಬೆಂಗಳೂರಿನಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ಕ್ಷೀಣಿಸುತ್ತಿದೆ ಎಂದು ನಟ ಮದನ್ ಪಟೇಲ್ ಕಳವಳ ವ್ಯಕ್ತಪಡಿಸಿದರು. ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ (ಸಿಎಫ್‌ಟಿಆರ್‌ಐ) ಮತ್ತು ಕನ್ನಡ ಸಹೃದ ಬಳಗ ವತಿಯಿಂದ ಸಿಎಫ್‌ಟಿಆರ್‌ಐ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಮಾತನಾಡಿ, ಬೆಂಗಳೂರಿನಲ್ಲಿ ಹೊರ ರಾಜ್ಯದಿಂದ ಆಗಮಿಸಿದವರೇ ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುತ್ತಾರೆ. ಅವರು ಅವರ ಮಾತೃಭಾಷೆಯಲ್ಲಿಯೇ ಮಾತನಾಡುತ್ತಾರೆ. ಹೊರ ರಾಜ್ಯದಿಂದ ಆಗಮಿಸಿದವರಿಗೆ ಪ್ರೀತಿಯಿಂದ ಕನ್ನಡ ಕಲಿಸುವ ಕಾರ್ಯ ಆಗಬೇಕು. ಹೊರ ರಾಜ್ಯದ ಸಾಕಷ್ಟು ಜನರು ಇಲ್ಲಿ ಕನ್ನಡ ಕಲಿತು ಮಾತನಾಡುತ್ತಿರುವುದನ್ನು ಸಹ ನಾನು ನೋಡಿದ್ದೇನೆ ಎಂದರು.ತಮಿಳುನಾಡಿನಲ್ಲಿ ಎಲ್ಲರೂ ತಮಿಳಿನಲ್ಲೇ ವ್ಯವಹರಿಸುತ್ತಾರೆ. ಆ ರೀತಿಯ ಭಾಷಾ ಅಭಿಮಾನ ನಮ್ಮಲ್ಲೂ ಮೂಡಬೇಕು. ಕನ್ನಡ ಉಳಿಸಲು ಭಿಕ್ಷೆ ಬೇಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಬೇಸರವಾಗಿದೆ. ಪ್ರತಿಯೊಬ್ಬ ಕನ್ನಡಿಗರು ಕನ್ನಡದಲ್ಲಿ ವ್ಯವಹರಿಸಲು ಪ್ರಾರಂಭಿಸಿದರೆ ಕನ್ನಡದ ಬೆಳವಣಿಗೆ ಸಾಧ್ಯ ಎಂದು ಅಭಿಪ್ರಾಯಪಟ್ಟರು.ಕನ್ನಡ ಸಹೃದ ಬಳಗದ ಅಧ್ಯಕ್ಷ ಕೃಷ್ಣಯ್ಯ ಮಾತನಾಡಿ, ಹರಿದುಹಂಚಿ ಹೋಗಿದ್ದ ಕನ್ನಡನಾಡು ಹೋರಾಟದ ಮೂಲಕ ಒಗ್ಗೂಡಿತು. ಈ ಕಾರಣಕ್ಕಾಗಿ ನಾಡಿನಾದ್ಯಂತ ಎಲ್ಲರು ಸಂಭ್ರಮದಿಂದ ಕನ್ನಡ ರಾಜ್ಯೋತ್ಸವ ಆಚರಿಸುತ್ತಾರೆ. ಕನ್ನಡ ಇಂದು ಹೆಮ್ಮರವಾಗಿ ಬೆಳೆದಿದೆ ಎಂದು ಸಂತಸ ವ್ಯಕ್ತಪಡಿಸಿದರು. ವೇದಿಕೆಯಲ್ಲಿ ಸಿಎಫ್‌ಟಿಆರ್‌ಐ ನಿರ್ದೇಶಕ ಡಾ.ಗಿರಿಧರ್ ಪರ್ವತಂ, ಕವಯಿತ್ರಿ ಅಮ್ಮಯ್ಯ ಶೇಖರ್ ಇದ್ದರು.



ವಿಜಯವಾಣಿ ಚಿತ್ರ

ಸಿಎಫ್‌ಟಿಆರ್‌ಐನಲ್ಲಿ ಶನಿವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ನಟ ಮದನ್ ಪಟೇಲ್ ಉದ್ಘಾಟಿಸಿದರು. ಡಾ.ಗಿರಿಧರ್ ಪರ್ವತಂ, ಅಮ್ಮಯ್ಯ ಶೇಖರ್, ಕೃಷ್ಣಯ್ಯ ಹಾಗೂ ಇತರರು ಇದ್ದರು.